**ಅಸಲು ದಾವಾ ನಂಃ 11/2015**
**ಪಿ.ಡಬ್ಲ್ಯೂಃ 3,**

**ದಿನಾಂಕ :19-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀಮತಿ. ಎಮ್. ವಿ. ಎಲ್ . ಪ್ರತಿವಾದಿ ಪರ ವಕೀಲರಿಂದ :**

ನಾನು ರೇಷ್ಮೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ಈಗ ನಿವೃತ್ತಿಯಾಗಿದ್ದೇನೆ. ನಾನು ಸ್ಥಳೀಯ ಗುಲಬರ್ಗಾದಲ್ಲಿ ಕೆಲಸ ಮಾಡುತ್ತಿದ್ದೆ. ಡೋನೂರು ಗ್ರಾಮದಲ್ಲಿ ನಮ್ಮ ಸಂಬಂಧಿಕರು ಯಾರು ಇಲ್ಲಾ, ನಾನು ಡೋನೂರ ಗ್ರಾಮಕ್ಕೆ ನಾನು ಇಲಾಖಾ ಕೆಲಸಕ್ಕೆ ಹೋಗುತ್ತಿದ್ದೆ. ನನಗೆ ದಾವಾ ಸರ್ವೆ ನಂಬರ ನೆನೆಪಿಲ್ಲಾ. ನಾನು ದಾವಾ ಜಮೀನು ಮತ್ತು ಮನೆಗೆ ಆಜು ಬಾಜು ಏನು ಇದೆ ಎಂದು ನೋಡಿದ್ದೇನೆ. ಒಂದು ಜಮೀನು ಮೂರುವರೆ ಎಕರೆ ಇದೆ, ಇನ್ನೊಂದು ಜಮೀನು ಒಂದುವರೆ ಎಕರೆ ಇದೆ. ಮೂರುವರೆ ಎಕರೆ ಜಮೀನಿನ ಪೂರ್ವ, ಪಶ್ಚಿಮಕ್ಕೆ , ಉತ್ತರ , ದಕ್ಷಿಣಕ್ಕೆ ಯಾರು ಜಮೀನು ಇದೆ ಎಂದು ಗೊತ್ತಿಲ್ಲ. ಒಂದುವರೆ ಎಕರೆ ಜಮೀನಿನ ಪೂರ್ವ, ಪಶ್ಚಿಮಕ್ಕೆ , ಉತ್ತರ , ದಕ್ಷಿಣಕ್ಕೆ ಯಾರು ಜಮೀನು ಇದೆ ಎಂದು ಗೊತ್ತಿಲ್ಲ. ನಾನು ಸದರಿ ಜಮೀನುಗಳಿಗೆ 2014-15 ರಲ್ಲಿ ಹೋಗಿರಬಹುದು. ದಾವಾ ಜಮೀನುಗಳು ಡೋನೂರ ಗ್ರಾಮದ ಪೂರ್ವ ದಿಕ್ಕಿಗೆ ಬರುತ್ತದೆ. ನಾನು ದಾವಾ ಜಮೀನುಗಳಿಗೆ 2014-15 ರಲ್ಲಿ ಹೋಗಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ವಾದಿ ನಂ-1 ರಿಂದ 5 ಕಳೆದ 30 ವರ್ಷಗಳಿಂದ ಸೋನೆಫುರ ಗಲ್ಲಿ , ಬ್ರಹ್ಮಪುರ ಗುಲಬರ್ಗಾದಲ್ಲಿ ವಾಸ ಇದ್ದಾರೆ. 5ನೇ ವಾದಿಯ ಗಂಡ 2000 ಇಸವಿಯಲ್ಲಿ ತೀರಿಕೊಂಢಿರುತ್ತಾರೆ. ಕಾಶೇಪ್ಪ ಮರಣ ಹೊಂದುವೆ ಕಾಲಕ್ಕೆ ಆತನಿಗೆ ವಯಷ್ಟು ಇತ್ತು ಎಂದು ಗೊತ್ತಿಲ್ಲಾ. ಕಾಶೇಪ್ಪ ಇತನು ಡೋನುರ ಗ್ರಾಮದಲ್ಲಿ ತೀರಿ ಹೋಗಿದ್ದಾನೆ, ಆತನಿಗೆ ಆರಾಮ ಇರಲಿಲ್ಲಾ, ಆತನಿಗೆ ಟಿ.ಬಿ. ಆಗಿತ್ತು. ಕಾಶೇಪ್ಪನ ತಂದೆ ಮೀನಪ್ಪನನ್ನು ನೋಡಿಲ್ಲಾ. ಕಾಶೇಪ್ಪ ತಂದೆ ಮೀನಪ್ಪ ಇವರು ಮೊದಲು ತೀರಿಹೋಗಿದ್ದಾರೆ. ಮೀನಪ್ಪ ಇತನು ಮೊದಲು ತೀರಿ ಹೋಗಿದ್ದಾನೆ ಅಂತಾ ಕಾಶೇಪ್ಪ ನನಗೆ ಹೇಳಿರುತ್ತಾನೆ.

**ಅಸಲು ದಾವಾ ನಂಃ 11/2015**
**ಪಿ.ಡಬ್ಲ್ಯೂಃ 3,**

ಮೀನಪ್ಪನ ಜೀವಿತ ಅವಧಿಯಲ್ಲಿ ಆತನ ಮಕ್ಕಳಾದ ಕಾಶೇಪ್ಪ ಮತ್ತು ದೇವಿಂದ್ರಪ್ಪ ನಡುವೆ ಪಾಲು ಆಗಿತ್ತು ಎಂದರೆ ಸರಿಯಲ್ಲ. ವಾದಿಯರು ಗುಲಬರ್ಗಾದಲ್ಲಿ ನಮ್ಮ ಮನೆಯ ಬಾಜು ಇದ್ದ ಕಾರಣ ಅವರಿಗೆ ಸಹಾಯ ಮಾಡಲು ಅವರ ಕುಟುಂಬದ ಇತಿಹಾಸದ ಬಗ್ಗೆ ಗೊತ್ತಿಲ್ಲದಿದ್ದರೂ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಂ. 4 ಮತ್ತು 6 ರಲ್ಲಿ ಬರೆದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನನಗೆ ಎ.ಸಿ. ರವರ ನ್ಯಾಯಾಲಯದಲ್ಲಿ ಯಾವ ಕೇಸ ನಡೆದಿದೆ ಎಂದು ನನಗೆ ಮಾಹಿತಿ ಇಲ್ಲಾ. ಕಾಶೇಪ್ಪ ಮತ್ತು ದೇವಿಂದ್ರಪ್ಪ ನ ನಡುವೆ ಏನೆಲ್ಲಾ ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿದೆ, ಅವರು ನಡುವೆ ಯಾವುದೇ ಕೊಡುವ ತೊಗುವ ವ್ಯವಹಾರ ಆಗಿಲ್ಲಾ, ನಾನು ಆ ವೇಳೆಯಲ್ಲಿ ಹಾಜರು ಇರಲಿಲ್ಲಾ, ಆದರೆ ಕಾಶೇಪ್ಪ ಹೇಳುತ್ತಿದ್ದ ಎಂದು ನುಡಿಯತ್ತಾರೆ. ನನಗೆ 5 ನೇ ವಾದಿ ಈ ರೀತಿ ಸುಳ್ಳು ಸಾಕ್ಷಿ ನುಡಿಯಲು ಹೇಳಿದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ವಾದಿ ಮತ್ತು ಪ್ರತಿವಾದಿಯ ಕುಟುಂಬದ ಬಗ್ಗೆ ಗೊತ್ತಿಲ್ಲಾ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**